# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಯವರ ನ್ಯಾಯಾಲಯ, ವಿರಾಜಪೇಟೆ

**ದಿನಾಂಕಃ 22-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ. ಐ ಆರ್ ಪಿ ವಕೀಲರಿಂದಃ**

ನಾನು ನನ್ನ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ವಾದಿಯು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಆ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| ನಿಶಾನೆಗಳು | ದಾಖಲಾತಿಗಳು |
|---|---|
| ನಿ.ಪಿ. 1 | ದಿಃ30-06-1986 ರ ಮೂಲ ಕ್ರಯಪತ್ರ. |
| ನಿ.ಪಿ. 2 | ಸ.ನಂಃ34/1 ಮತ್ತು 34/2 ರ ಜಮಾಬಂಧಿ. |
| ನಿ.ಪಿ. 3 | ನಮೂನೆ - 3 ರ ಪ್ರತಿ. |
| ನಿ.ಪಿ. 4 | ದಿಃ10-12-2012 ರ ಕಟ್ಟಡ ಕಟ್ಟಲು ನೀಡಿರುವ ಪರವಾನಿಗೆಯ ಪ್ರತಿ. |
| ನಿ.ಪಿ. 5 | ದಿಃ06-12-2012 ರ ಆರಂಭಿಕ ಅರ್ಹತಾ ಪತ್ರ. |
| ನಿ.ಪಿ. 6 | ದಿಃ18-06-2018 ರಂದು ಪಟ್ಟಣ ಪಂಚಾಯಿತಿಯವರು ನೀಡಿರುವ ಕಟ್ಟಡ ಪರವಾನಿಗೆ. |
| ನಿ.ಪಿ. 7 | ದಿಃ03-01-2021 ರಂದು 1ನೇ ವಾದಿಯು ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ ಯವರಿಗೆ ನೀಡಿರುವ ಅರ್ಜಿಯ ಯಥಾ ನಕಲು. |
| ನಿ.ಪಿ. 8 | ದಿಃ14-03-2023 ರಂದು 1ನೇ ವಾದಿಯು ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ ಯವರಿಗೆ ಕಟ್ಟಡ ಪರವಾನಿಗೆಯನ್ನು ನವೀಕರಿಸಿಕೊಡುವ ಬಗ್ಗೆ ನೀಡಿರುವ ಅರ್ಜಿಯ ಸ್ವೀಕೃತಿ. |
| ನಿ.ಪಿ. 9 | ಪುರಸಭೆ ಕಾರ್ಯಾಲಯ , ವಿರಾಜಪೇಟೆರವರು ನೀಡಿರುವ ಹೆಸರು ಬದಲಾವಣೆಯ ರಿಜಿಸ್ಟರ್ ಪ್ರತಿ. |

| | |
|---|---|
| ನಿ.ಪಿ. 10 | 1 ನೇ ವಾದಿಯ ಗಂಡನ ಮರಣ ಪ್ರಮಾಣ ಪತ್ರದ ದೃಡೀಕೃತ ನಕಲು. |
| ನಿ.ಪಿ. 11 | ದಿಃ08-02-2023 ರಂದು ವಿರಾಜಪೇಟೆ ನಗರ ಪೊಲೀಸ್ ಠಾಣಾಧಿಕಾರಿ ನೀಡಿರುವ ಸ್ವೀಕೃತಿಯ ಪ್ರತಿ. |
| ನಿ.ಪಿ. 12 | ಓ ಎಸ್ ನಂಃ107/2002 ರ ವಾದ ಪತ್ರದ ದೃಡೀಕೃತ ನಕಲು. |
| ನಿ.ಪಿ. 13 | ಓ ಎಸ್ ನಂಃ107/2002 ರಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ದೃಡೀಕೃತ ನಕಲು. |
| ನಿ.ಪಿ. 14 | ಓ ಎಸ್ ನಂಃ107/2002 ರಲ್ಲಿ ವಾದಿಯು ಕೌಂಟರ್ ಕ್ಲೇಮ್‌ಗೆ ಸಲ್ಲಿಸಿರುವ ಪ್ರತಿವಾದ ಪತ್ರದ ದೃಡೀಕೃತ ನಕಲು. |
| ನಿ.ಪಿ. 15 | ದಿಃ08-02-2023 ರಂದು 1 ನೇ ಪ್ರತಿವಾದಿಯು ಮುಖ್ಯಾಧಿಕಾರಿ, ಪುರಸಭೆ ಕಾರ್ಯಾಲಯಕ್ಕೆ ನೀಡಿರುವ ಅರ್ಜಿಯ ಸ್ವೀಕೃತಿ ಪ್ರತಿ. |
| ನಿ.ಪಿ. 16 | ದಿಃ03-01-2023 ರಂದು ವಿರಾಜಪೇಟೆ ನಗರ ಪೊಲೀಸ್ ಠಾಣೆಯವರು ನೀಡಿದಂತಹ ಹಿಂಬರಹ. |
| ನಿ.ಪಿ. 17 | ದಿಃ19-12-2023 ರಂದು ವಿರಾಜಪೇಟೆ ನಗರ ಪೊಲೀಸ್ ಠಾಣಾಧಿಕಾರಿ ನೀಡಿರುವ ಸ್ವೀಕೃತಿಯ ಪ್ರತಿ. |
| ನಿ.ಪಿ. 18 | ಸ.ನಂಃ34/1 ಹಾಗೂ 34/2 ರ ನಕಾಶೆ. |

**ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

ಸಹಿ/-
**(ಪ್ರದೀಪ ಪೋತದಾರ)**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**

**ಓ.ಎಸ್.51/2023**
**ಪಿ ಡಬ್ಲ್ಯೂ.1**